

ಅದುವರೆಗಿನ ಮೌನಕ್ಕೆ ವಿದಾಯ ಹೇಳಿದರು.

ಮಾಧವ ಮಾತನಾಡುವುದೇ ಹಾಗೆ. ಯಾವುದಾದರೊಂದು ಉಪಮೆಯನ್ನು ಬಳಸಿ ಸ್ಪಷ್ಟವಾಗಿ ಕಟುಸತ್ಯವನ್ನು ಕಣ್ಣಿಗೆ ಕಟ್ಟಿದಂತೆ ವಿವರಿಸುವುದು. ಬಹುಶಃ ಯಕ್ಷಗಾನದ ಪ್ರಭಾವವಿರಬೇಕು.

“ಆದರೂ ನಿನ್ನೆ ತನಕ ಅಲ್ಲೇ ಇದ್ದಿರಲ್ಲ?” ಮರು ಸವಾಲೆಸೆದೆ.

“ನಿನ್ನೆ ತನಕ ಹರಿಯುವ ನೀರಿಗೆ ಪ್ರವಾಹವಿತ್ತು ಸುಬ್ರಾಯ. ನೋಡು ಈಗ ಯಾರೋ ಕಟ್ಟೆ ಬಿಗಿದು ನಿಲ್ಲಿಸಿದರಲ್ಲ.” ಒಂದು ಕೈಗೆ ಬ್ಯಾಂಡೇಜು ಸುತ್ತಿ ಕೊರಳಿಗೆ ನೇತಾಡಿಸಿದ್ದನ್ನು ತೋರಿಸುತ್ತಾ ಮಾಧವ ತುಸು ಆವೇಶದಲ್ಲಿ ಹೇಳಿದಾಗ ನಿರುತ್ತರನಾದೆ. ‘ಛೇ... ಎಂತಹ ಕಲಾವಿದನೀತ? ಹೀಗಾಗಬಾರದಿತ್ತು’ ಮನಸು ನುಡಿಯಿತು.

***

ನೀರ್ಕೆರೆ ಮಠದ ಸ್ವಾಮೀಜಿಯ ಚಾತುರ್ಮಾಸ್ಯದ ಅಂಗವಾಗಿ ಕಾರ್ಕಳ ಕಾಬೆಟ್ಟುವಿನಲ್ಲಿ ರಾವಣ ಮೋಕ್ಷ ತಾಳಮದ್ದಳೆ. ಮಣೂರು ಮಾಧವನದ್ದು ರಾವಣ. ಅಲ್ಲಿ ಯಾವ ಪರಿಯಲ್ಲಿ ರಾವಣನನ್ನು ಅಭಿವ್ಯಕ್ತಗೊಳಿಸಿದರು ಎಂದರೆ, ಪ್ರೇಕ್ಷಕರು ‘ಹೌದೌದು ರಾವಣ ಮಾಡಿದ್ದೇ ಸರಿ. ಆತನೇ